# ಹಫೀಜನ ಏಕನಿಷ್ಠೆ

**ಕುಮಾರಿ ಉಷಾ**

ಸಾಧಕನಿಗೆ ಇರಬೇಕಾದ ಏಕನಿಷ್ಠೆ ಹಾಗೂ ಅದರಿಂದ ದೊರೆಯುವ ಫಲವನ್ನು ಮನೋಜ್ಞವಾದ ಕತೆಯ ಮೂಲಕ ತಿಳಿಸಿರುವ ಲೇಖಕಿ ವಾರಾಣಸಿಯಲ್ಲಿರುವ ರಾಮಕೃಷ್ಣ ಮಿಷನ್ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

**ಮಾ**ಯಾಪಾಶವು ಅದೆಷ್ಟು ಭಯಂಕರ! ಏಕನಿಷ್ಠೆಯೆಂಬುದು ಮನುಜನನ್ನು ಅದರಿಂದ ಹೇಗೆ ಪಾರು ಮಾಡುವುದೆಂಬುದಕ್ಕೆ ನಿದರ್ಶನವಾಗಿ ಸ್ವಾಮಿ ಅಖಂಡಾನಂದರು ತಮ್ಮ ಗುರುಭಾಯಿಗಳಾದ ಸ್ವಾಮಿ ಶಿವಾನಂದರಿಗೆ ಪರ್ಶಿಯಾ ದೇಶದ ಸುಪ್ರಸಿದ್ಧ ಭಕ್ತಕವಿ ಮೊಹಮ್ಮದ್ ಶಮ್ಸುದ್ದೀನ್ ಹಫೀಜನ ಕತೆಯನ್ನೊಮ್ಮೆ ಹೇಳಿದರು.

ಅತಿ ದರಿದ್ರನಾದ ಮುಸಲ್ಮಾನ ಭಿಕ್ಷುಕ ಹಫೀಜ್, ಬಹಳ ಕಷ್ಟದಿಂದ ಹೇಗೋ ತನ್ನ ಜೀವನ ಸಾಗಿಸುತ್ತಿದ್ದ. ಒಂದು ದಿನ ಆತನು ಭಿಕ್ಷೆ ಬೇಡುತ್ತ ನಾಡಿನ ಅತ್ಯಂತ ಸುಂದರಿಯಾದ ತರುಣಿ ವೇಶ್ಯೆಯೊಬ್ಬಳ ಬಾಗಿಲಿನಲ್ಲಿ ನಿಂತ. ತೆರೆಯ ಮರೆಯಿಂದಲೆ ಭಿಕ್ಷೆ ನೀಡಲು ಬಂದ ಅವಳ ರೂಪಕ್ಕೆ ಮಾರುಹೋದ ಹಫೀಜ್, 'ನಾನೊಬ್ಬ ಕಡು ಬಡವ; ಬೀದಿ ಭಿಕಾರಿ. ಈಕೆಯಾದರೋ ಧನಲೋಭಿ, ವೇಶ್ಯೆ. ನನ್ನಂಥವನು ಇಂಥವಳನ್ನು ಪಡೆಯುವುದಾದರೂ ಎಂತು?" ಎಂದೆಲ್ಲ ಯೋಚಿಸಲಾರಂಭಿಸಿದ. ಹೆಳವನಿಗೆ ಚಂದ್ರಮನು ಎಂದಾದರೂ ಕೈಗೆಟುಕುವನೆ? ಕಾಸಿಲ್ಲದ ತಿರುಕನಿಗೆ ಈ ರೂಪಸಿ ಸಿಗುವಳೆ? ಏನೇ ಆಗಲಿ, ಹಣವನ್ನು ಸಂಗ್ರಹಿಸಿದರೆ ತನ್ನ ಈ ಪ್ರಬಲ ಆಸೆಯು ನೆರವೇರಬಹುದೆಂಬ ಹಂಬಲದಿಂದ, ತನಗೆ ದೊರಕಿದ ಭಿಕ್ಷಾನ್ನದ ಅರ್ಧವನ್ನು ಮಾತ್ರವೇ ತಿಂದು ಉಳಿದರ್ಧವನ್ನು ಸಗಣಿಗೆ ಸೇರಿಸಿ ಬೆರಣಿ ತಟ್ಟಿ ಅದನ್ನು ಮಾರಲು ಪ್ರಾರಂಭಿಸಿದ. ಭಿಕ್ಷೆಯಲ್ಲಿ ದೊರೆತ ಚಿಕ್ಕಾಸನ್ನೂ ತನಗೋಸ್ಕರ ಖರ್ಚು ಮಾಡದೆ ಅದನ್ನೂ ಕೂಡಿಟ್ಟ. ತಾನು ಮೋಹಿಸಿದ ಲಲನೆಯ ಮನಸೆಳೆಯಲು ಅಷ್ಟರಲ್ಲಿ ಅವನಿಗೆ ಇನ್ನೊಂದು ಮಾರ್ಗವೂ ಹೊಳೆಯಿತು.



ಹಫೀಜ್

ಪ್ರತಿದಿನ ರಾತ್ರಿ ಗಣಿಕೆಯ ಮನೆಯನ್ನು ಉಪಾಯವಾಗಿ ಪ್ರವೇಶಿಸಿ, ಯಾರಿಗೂ ತಿಳಿಯದಂತೆ ಕೋಣೆಗಳನ್ನು ಗುಡಿಸಿ, ಪಾತ್ರೆಗಳನ್ನು ತೊಳೆದು, ಹಂಡೆಗೆ ನೀರು ತುಂಬಿಸಿ ಬಂದು ಬಿಡುತ್ತಿದ್ದ. ತಮ್ಮ ಕೆಲಸಗಳನ್ನೆಲ್ಲ ರಾತ್ರಿಯೇ ಯಾರೊ ಬಂದು ಪೂರೈಸುತ್ತಿದ್ದುದನ್ನು ಕಂಡ ಮನೆಗೆಲಸದವರು ಚಕಿತರಾಗಿ ಒಂದು ದಿನ ತಮ್ಮ ಯಜಮಾನಿಗೆ ವಿಷಯವನ್ನು ತಿಳಿಸಿದರು. ಪ್ರತಿ ರಾತ್ರಿಯೂ ಗುಪ್ತವಾಗಿ ಈ ರೀತಿ ಸೇವೆ ಮಾಡುತ್ತಿರುವವರು ಯಾರು? ಮನೆಗೆ ಬರುವ ಕಳ್ಳನ ಉದ್ದೇಶವಾದರೂ ಏನಿರಬಹುದು? ಎಂಬ ಕುತೂಹಲ ಅವಳಿಗೆ. ತನ್ನ ಆಳುಗಳಿಗೆ ಹೇಳಿದಳು: "ಯಾರಿಗೂ ತಿಳಿಯದಂತೆ ಮನೆಯೊಳಗೆ ಬಂದು ಕೆಲಸವನ್ನೆಲ್ಲ ಮುಗಿಸಿ ಹೋಗುವವರು ಯಾರೆಂದು ಈ ರಾತ್ರಿ ಪತ್ತೆ ಹಚ್ಚಬೇಕು. ನೀವೆಲ್ಲ ನಿದ್ರೆ ಬಂದವರಂತೆ ನಟಿಸಿ. ನಾನೂ ಎಚ್ಚರವಾಗಿರುತ್ತೇನೆ. ಆದರೆ 'ಕಳ್ಳ' ಬಂದೊಡನೆಯೆ ಅವನನ್ನು ಹಿಡಿಯಬೇಡಿ. ಅವನು ಕೆಲಸವನ್ನೆಲ್ಲ ಮುಗಿಸಿದ ಕೂಡಲೆ ನನ್ನನ್ನು ಕರೆಯಿರಿ. ಆದರೆ, ಎಚ್ಚರಿಕೆ. ಬಂದವನ ಮೇಲೆ ಯಾವ ಹಿಂಸೆಯೂ ಕೂಡದು."

ಮನೆಮಂದಿಯೆಲ್ಲ ಈ ಪರೋಪಕಾರಿ 'ಕಳ್ಳ ಮಹಾತ್ಮ'ನಿಗಾಗಿ ಕಾದರು. ಸಮಯಕ್ಕೆ ಸರಿಯಾಗಿ ಆತನು ಬಂದು ಕೆಲಸವನ್ನೆಲ್ಲ ಮುಗಿಸಿ ಇನ್ನೇನು ಓಡಿಹೋಗಬೇಕು ಎನ್ನುವಷ್ಟರಲ್ಲಿ ಇದ್ದಕ್ಕಿದ್ದಂತೆ, ಪ್ರಾಣಕ್ಕಿಂತ ಪ್ರಿಯಳಾದ ಆ ರಮಣಿಯು ಅವನ ಕಣ್ಣೆದುರು ಪ್ರತ್ಯಕ್ಷಳಾದಳು. ಹಫೀಜನಿಗೆ ದಿಗ್ಭ್ರಮೆಯೇ ಆಯಿತು. ಪರೋಪಕಾರಿ 'ಕಳ್ಳ'ನ ಕೆದರಿದ ಕೂದಲು, ಕೊಳಕು ಬಟ್ಟೆ, ಒಣಗಿದ ಶರೀರವನ್ನು ಕಂಡ

ದಾಸಿಯು ಮರುಗಿ, ಅವನಿಗೆ ಸುಗಂಧ ತೈಲ, ಹೊಸಬಟ್ಟೆ ಹಾಗೂ ಉತ್ತಮ ಭೋಜನಗಳನ್ನು ಒದಗಿಸಬೇಕೆಂದು ಸೇವಕರಿಗೆ ಆದೇಶಿಸಿದಳು. ಆಗಲೇ ಸೂರ್ಯನ ಕಿರಣಗಳು ಎಲ್ಲೆಲ್ಲೂ ಹರಡಿದ್ದವು. ಸ್ನಾನಾಹಾರದ ಬಳಿಕ ಹಫ್ಲೀಜನನ್ನು ಸ್ವತಃ ತನ್ನ ಮಲಗುವ ಕೋಣೆಗೆ ಕರೆದುಕೊಂಡು ಹೋಗಿ ಮೆತ್ತನೆಯ ಹಾಸಿಗೆಯನ್ನು ತೋರುತ್ತ, "ನಿತ್ಯವೂ ನೀನು ಮಾಡುತ್ತಿರುವ ಉಪಕಾರದ ಉದ್ದೇಶ ಹಾಗೂ ನೀನು ಯಾರೆಂಬುದನ್ನು ಈ ಸಂಜೆ ನಾನು ನಿನ್ನಿಂದಲೇ ತಿಳಿಯುವೆ. ಈಗ ಸ್ವಲ್ಪ ವಿಶ್ರಮಿಸಿಕೊ" ಎಂದು ಹೇಳಿ ಹೊರಟುಹೋದಳು. ಹಿಂದೆಂದೂ ಇಷ್ಟೊಂದು ಸುಖಸಂಪತ್ತನ್ನು ಅನುಭವಿಸಿರದ ಹಫ್ಲೀಜನಿಗೆ ಸ್ವರ್ಗವೇ ಸಿಕ್ಕಂತಾಯಿತು.

ಇಂದು ಸಂಜೆ ತನ್ನ ಮನದಾಸೆ ಪೂರೈಸುವುದೆಂದು ಬಗೆದ ಭಿಕಾರಿಯು ವಿಶ್ರಮಿಸುವುದಾದರೂ ಹೇಗೆ? ಅತ್ಯಂತ ವ್ಯಾಕುಲತೆಯಿಂದ ಸಂಜೆಯಾಗುವುದನ್ನೆ ಕಾಯುತ್ತಿದ್ದ ಅವನಿಗೆ ದಿನವು ಅತಿ ದೀರ್ಘವೆನಿಸಿತು; ಕ್ಷಣವೊಂದು ಯುಗವಾಯಿತು. ಸಂಜೆಯಾಗುತ್ತಲೆ ಪಶ್ಚಿಮ ದಿಕ್ಕನ್ನೆ ದಿಟ್ಟಿಸುತ್ತ ಇನ್ನೂ ಸೂರ್ಯಾಸ್ತವಾಗುತ್ತಿಲ್ಲವಲ್ಲ ಎಂದು ಪರಿತಪಿಸುತ್ತಿದ್ದಂತೆ, ದಾಸಿಯೊಬ್ಬಳು ದೀಪ ಹಚ್ಚಿಡಲೆಂದು ಕೋಣೆಯೊಳಗೆ ಬಂದಳು. ದೀಪವನ್ನು ಕಂಡೊಡನೆಯೇ ಏಕನಿಷ್ಠ ಹಫ್ಲೀಜನಿಗೆ ಪ್ರತಿನಿತ್ಯವೂ ಪೀರ್‌ನ ದರ್ಗಾದಲ್ಲಿ ತಾನು ದೀಪವನ್ನು ಹಚ್ಚುತ್ತಿದ್ದುದರ ನೆನಪಾಯಿತು. 'ಅನೇಕ ವರ್ಷಗಳಿಂದ ದಿನವೂ ಶ್ರದ್ಧೆಯಿಂದ ಮಾಡಿಕೊಂಡು ಬರುತ್ತಿದ್ದ ಕೆಲಸವನ್ನು ಇಂದು ಬಿಡುವುದೆ? ಇಲ್ಲ! ಖಂಡಿತವಾಗಿಯೂ ಇಲ್ಲ!' ಇದ್ದಕ್ಕಿದ್ದಂತೆ ಶ್ರದ್ಧಾಳು ಹಫ್ಲೀಜನು ಪೀರ್‌ಗೆ ದೀಪ ಹಚ್ಚಲೆಂದು ಕಳಕಳಿಯಿಂದ ಓಡಿದ. ದೀಪ ಹಚ್ಚಿ ನೋಡುತ್ತಾನೆ, ಫಕೀರರಿಬ್ಬರು ಅಲ್ಲೆ ತುಸುದೂರದಲ್ಲಿ ಮದ್ಯಪಾನ ಮಾಡುತ್ತ ಕುಳಿತಿದ್ದಾರೆ. ಹಫ್ಲೀಜನನ್ನು ಕಂಡ ಅವರು ಅವನನ್ನೂ ಕುಡಿಯಲು ಆಮಂತ್ರಿಸಿದಾಗ, ಉದ್ವೇಗದಿಂದ ಅವನೆಂದ, "ಛಿ, ಛಿ, ನಾನೊಬ್ಬ ನಿಷ್ಠಾವಂತ ಮುಸಲ್ಮಾನನಾಗಿ ಮದ್ಯ ಸೇವನೆಯಲ್ಲಿ ತೊಡಗುವುದೆ?" ಮತ್ತೆ ಮತ್ತೆ ಅವರು ವಿನಂತಿಸಿಕೊಂಡಾಗಲೂ ಹಫ್ಲೀಜನು ಶರಾಬು ಕುಡಿಯಲು ಒಪ್ಪದಿರಲು, ಅವರು ತಾವು ಕುಡಿಯುತ್ತಿದ್ದ ಮದ್ಯದ ಬಟ್ಟಲನ್ನು ನೆಲಕ್ಕೆ ಬಿಸಾಡಿದರು. ಗಾಜಿನ ಬಟ್ಟಲು ಒಡೆದು ಚೂರು ಚೂರಾದರೂ ಅದರಿಂದ ಯಾವ ದ್ರವ್ಯವೂ ಚೆಲ್ಲಿದಂತೆ ಹಫ್ಲೀಜನಿಗೆ ಕಾಣಲಿಲ್ಲ. ಏನಾಶ್ಚರ್ಯ! ಅವನ ಮನದಲ್ಲಿ ಅದ್ಭುತ ಭಾವನೆಯೊಂದು ಎದ್ದಿತು. ಇವರು ಸಾಮಾನ್ಯ ಫಕೀರರಲ್ಲ ಎಂದು ಅವನಿಗೆ ಸ್ಪಷ್ಟವಾಯಿತು. ಈಗವನು ಅವರನ್ನು ತನಗೂ ಶರಾಬು ಬೇಕೆಂದು ಬೇಡಿದ. ಆಗ ಅವರೆಂದರು, "ಇದೇನು, ನಾವು ನಿನಗೆ ಕೊಟ್ಟಾಗ ನೀನದನ್ನು ನಿರಾಕರಿಸಿದೆ. ಇನ್ನು ನಿನಗದು ಸಿಗದು." ಹಫ್ಲೀಜನು ಅದಕ್ಕಾಗಿ ಅಂಗಲಾಚಿದಾಗ, 'ಬಟ್ಟಲು ಒಡೆದ ಸ್ಥಳವನ್ನು ನೆಕ್ಕಿದರೆ ಸ್ವಲ್ಪ ವೇನಾದರೂ ದಕ್ಕೀತು" ಎಂದರು. ಅವರ ಮಾತಿನಲ್ಲಿ ವಿಶ್ವಾಸ ತಳೆದು ಹಾಗೆ ಮಾಡಿದೊಡನೆಯೇ ಭಗವತ್ಪ್ರೇಮದಿಂದ ಉನ್ಮತ್ತನಾದ ಹಫ್ಲೀಜ, ಅವನನ್ನು ಬಿಗಿದಿದ್ದ ಮೋಹಪಾಶವು ಕಡಿಯಿತು, ಭೋಗಪಿಪಾಸೆಯು ಒಮ್ಮೆಲೆ ದೂರವಾಯಿತು.

ಈ ಕಡೆ ಚೆಲುವೆ ವೇಶ್ಯೆಯು ತನ್ನ ಕೋಣೆಗೆ ಮರಳಿ ಬಂದಾಗ ಹಫ್ಲೀಜನನ್ನು ಕಾಣದೆ ತವಕಗೊಂಡಳು. ಇಂತಹ ವೈಭೋಗವನ್ನು ತ್ಯಜಿಸಿದ್ದ ಈತನನ್ನು ಕಾಣಬೇಕೆಂಬ ಕಾತರತೆಯಿಂದ ಅರಸುತ್ತ ಹೊರಟಳು. ಊರ ಜನರನ್ನು ವಿಚಾರಿಸುತ್ತ ಪೀರ್‌ನ ದರ್ಗಾಕ್ಕೆ ಬಂದು ನೋಡಿದಾಗ ಆ ಪ್ರೇಮೋನ್ಮತ್ತ ಭಿಕ್ಷುಕನ ಎರಡೂ ಕಣ್ಣುಗಳಿಂದ ಆನಂದಾಶ್ರುಗಳು ಧಾರಾಕಾರವಾಗಿ ಹರಿಯುತ್ತಿವೆ! ಭಾವವಿಹ್ವಲನಾಗಿದ್ದ ಅವನು ಆಕೆಯನ್ನು ಕಂಡಾಗ ಸನ್ನೆಯಿಂದಲೇ ಅವಳಿಗೆ ಬಟ್ಟಲು ಬಿದ್ದ ಸ್ಥಳವನ್ನು ಸ್ವಲ್ಪ ಸವಿಯಲು ಹೇಳಿದ. ಏನಾಶ್ಚರ್ಯ! ಅವಳೂ ಭಗವದ್ಭಾವದಲ್ಲಿ ಪರವಶಳಾದಳು. ಆಕೆಯ ಜೀವನಪಥವೇ ಬದಲಾಯಿತು. ಒಂದೇ ಕ್ಷಣದ ಸಾಧುಸಂಗದಿಂದ ಅವಳಿಗೆ ನವಜೀವನ ಪ್ರಾಪ್ತವಾಯಿತು.

ಅಂದಿನಿಂದ ಹಫ್ಲೀಜನು ತನ್ನ ಬಡ ಕುಟೀರದಲ್ಲಿ ದಿನವೆಲ್ಲ ಅಲ್ಲಾನ ನಾಮಸ್ಮರಣೆಯಲ್ಲೆ ಕಳೆಯಲಾರಂಭಿಸಿದ. ಸಾಯಂಕಾಲ ಒಮ್ಮೆ ಮಾತ್ರವೇ ಭಿಕ್ಷೆಗೆಂದು ಹೊರಗೆ ಹೋಗುತ್ತಿದ್ದು, ತಾನು ನಂಬಿದ್ದ ಪೀರ್‌ಗೆ ದೀಪವನ್ನು ಹಚ್ಚಿ ಮರಳುತ್ತಿದ್ದ. ಬರುವಾಗ ದಾರಿಯಲ್ಲಿ ಬಿದ್ದಿರುವ ಮಣ್ಣಿನ ಮಡಕೆಯ ಚೂರುಗಳನ್ನು ಆಯ್ದು ತರುತ್ತಿದ್ದ. ಇದನ್ನು ಬಿಟ್ಟರೆ ಅವನು ಯಾರಿಗೂ ಅಷ್ಟಾಗಿ ಕಾಣಿಸಿಕೊಳ್ಳುತ್ತಿರಲಿಲ್ಲ. ಹೀಗೆ ದಿನಗಳು, ತಿಂಗಳುಗಳು, ವರ್ಷಗಳು ಕಳೆದವು. ಒಮ್ಮೆ ಅವನು ಎಂದಿನಂತೆ ಭಿಕ್ಷೆಗೆ ಬಾರದಿದ್ದುದನ್ನು ಗಮನಿಸಿದ ಅಕ್ಕಪಕ್ಕದವರು ಅವನ ಕುಟೀರವನ್ನು ಒಳಹೊಕ್ಕಾಗ ಕಂಡದ್ದಾದರೂ ಏನು? ಹಫ್ಲೀಜನ ಮೃತಶರೀರ ಹಾಗೂ ಅವನ ಸಂಪತ್ತೆನಿಸಿಕೊಂಡ ಒಂದು ಹರಿದ ಚಾಪೆ, ನೀರಿನ ಪಾತ್ರೆ, ಒಡೆದ ಪಿಂಗಾಣಿ ಬಟ್ಟಲು ಹಾಗೂ ಏಳು ದೊಡ್ಡ ಗಾತ್ರದ ಮಣ್ಣಿನ ಜಾಡಿಗಳು. ಅವುಗಳ ತುಂಬ ಮಡಕೆಯ ಚೂರುಗಳು! ಪ್ರತಿ ದಿನವೂ ಆ ತಿರುಕ ಸಾಧಕನು ತನ್ನಲ್ಲಿ ಉದಯಿಸುತ್ತಿದ್ದ ಭಾವನೆಗಳನ್ನು ಮಡಕೆಯ ಚೂರುಗಳಲ್ಲಿ, ಮಡಕೆಯ ಚೂರುಗಳಿಂದಲೇ ಬರೆದು ಜಾಡಿಗಳಲ್ಲಿ ಹಾಕಿಡುತ್ತಿದ್ದ. ಬಳಿಕ ಇವನ್ನೆಲ್ಲ ಸಂಗ್ರಹಿಸಿದ ಪಂಡಿತರು 'ದೀವಾನಾ ಹಫ್ಲೀಜ್' ಎಂಬ ಹೆಸರಿನ ಖ್ಯಾತ ಕವಿತಾಸಂಕಲನವನ್ನು ಪ್ರಕಟಿಸಿದರು.